ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 3ನೇ ಪ್ರತಿವಾದಿ ವಾರಸುದಾರರ ಪರ ಶ್ರೀ ಕೆ.ಎಂ.ಎಲ್. ವಕೀಲರಿಂದಃ

ಆಸೀಫ್ ಇಕ್ಬಾಲ್ ರವರು ನಮ್ಮ ಕಂಪನಿಯನ್ನು ಬಿಟ್ಟಿರುವ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಆಸೀಫ್ ಇಕ್ಬಾಲ್ ರವರು ಈ ದಾವೆಗೆ ಸಂಬಂಧಿಸಿದಂತೆ ಲಿಖಿತ ಹೇಳಿಕೆಯನ್ನು ಮಾತ್ರ ಸಲ್ಲಿಸಲು ನಡವಳಿ ಹೊರಡಿಸಿರುತ್ತಾರೆಯೇ ಎಂದರೆ ಸಾಕ್ಷಿ ಆ ರೀತಿ ನಡವಳಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಆಸೀಫ್ ಇಕ್ಬಾಲ್ ರವರು ಈಗಲೂ ನನ್ನ ಜೊತೆಗೆ ಸಂಪರ್ಕದಲ್ಲಿ ಇರುತ್ತಾರೆ. 2005 ರಲ್ಲಿ ಆದ ಕ್ರಯ ಪತ್ರಕ್ಕೆ ಸಂಬಂಧಿಸಿದಂತೆ ಆದ ಮಾತುಕತೆಯು ಡಾಃ ಅಬ್ದುಲ್ಲಾ ಸಹೀಫ್ ಅಹಮದ್ ಅಲ್ಸಬಾನಿರವರ ಮುಂದೆ ಆಗಿರುತ್ತದೆ. ಆ ಬಗ್ಗೆ ನಮ್ಮ ಕಂಪನಿಯಲ್ಲಿ ಯಾವುದೇ ನಡವಳಿಯನ್ನು ಮಾಡಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ಕಂಪನಿಯು ಆಸ್ತಿಯನ್ನು ಖರೀದಿಸುವ ಮೊದಲು ಕ್ರಯದ ಕರಾರು ಪತ್ರ ಮಾಡಿಕೊಳ್ಳುತ್ತಾರೆ ನಂತರ ಕ್ರಯ ಪತ್ರವನ್ನು ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿಯು ಕೆಲವು ಕಂಪನಿ ಕ್ರಯ ಪತ್ರ ಮಾಡಿಕೊಳ್ಳುತ್ತಾರೆ ಕೆಲವು ಕಂಪನಿಗಳು ಕರಾರು ಪತ್ರ ಮಾಡಿಕೊಂಡು ನಂತರ ಕ್ರಯ ಪತ್ರ ಮಾಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ.

ದಿನಾಂಕ 30.07.2005 ರಲ್ಲಿ ಆದ ಕ್ರಯ ಪತ್ರವನ್ನು 2 ನೇ ಪ್ರತಿವಾದಿ ಜೊತೆ ಸೇರಿ ಸೃಷ್ಟಿಸಲಾಗಿರುವ ಕ್ರಯ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾಖಲೆಗಳನ್ನು ಸೃಷ್ಟಿಸಿಕೊಂಡು 3 ನೇ ಪ್ರತಿವಾದಿ ವಿರುದ್ದ ಪ್ರತ್ಯೇಕ ದಾವೆ ಸಲ್ಲಿಸಿರುವ ವಿಚಾರ ನನಗೆ

ತಿಳಿದಿರುವುದಿಲ್ಲ. ಓಎಸ್ 123/1994 ರಂತೆ 2 ನೇ ಪ್ರತಿವಾದಿ 3 ನೇ ಪ್ರತಿವಾದಿ ವಿರುದ್ದ ದಾಖಲಿಸಿದ್ದ ದಾವೆ ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಮ್ಮ ಕಂಪನಿಗೆ 2 ನೇ ಪ್ರತಿವಾದಿಯೇ ನೇರವಾಗಿ ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಓಎಸ್ 123/1994 ರ ದಾವೆಯ ವಿಚಾರವನ್ನು 2 ನೇ ಪ್ರತಿವಾದಿರವರೇ ನಮ್ಮ ಕಂಪನಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಅಸೀಫ್ ಇಕ್ಬಾಲ್ ರವರು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು ಆ ಬಗ್ಗೆ ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಡಿ-1 ರ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವ ಕಾರಣ ನನಗೆ ಸಾಕ್ಷಿ ನುಡಿಯಲು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿರವರು ಯಾವುದೇ ದಾಖಲೆಯನ್ನು 2 ನೇ ಪ್ರತಿವಾದಿಗೆ ಮಾಡಿಕೊಟ್ಟಿರುವುದಿಲ್ಲ ಮತ್ತು ಯಾವುದೇ ಸ್ವಾಧೀನವನ್ನು ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮೂಲತಃ ಚಿಕ್ಕಹೆಂಜಯ್ಯನವರ ಕುಟುಂಬಕ್ಕೆ ಸೇರಿದ ಸ್ವತ್ತು ಎಂದರೆ ಸರಿ. ದಿನಾಂಕ 30.07.2005 ರಲ್ಲಿ ಆದ ಕ್ರಯಪತ್ರ ಸೃಷ್ಟಿಸಿಕೊಂಡ ದಾಖಲೆಗಳ ಆಧಾರ ಮೇಲೆ ಆಗಿರುತ್ತದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿರವರು 1 ನೇ ಪ್ರತಿವಾದಿಗೆ ಅಥವಾ 2 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನವನ್ನು ಯಾವತ್ತಿಗೂ ಬಿಟ್ಟಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ, 1 ನೇ ಪ್ರತಿವಾದಿ ಮತ್ತು ವಾಸುದೇಮೂರ್ತಿರವರು ರಿಯಲ್ ಎಸ್ಟೇಟ್ ವ್ಯವಹಾರ ವ್ಯಕ್ತಿಗಳಾಗಿದ್ದು

ಸದರಿ ಕ್ರಯ ಪತ್ರವನ್ನು ಸುಳ್ಳಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.